**ಆರ್‌ಬಿಐ / 2007–08 / 62**
ಉಲ್ಲೇಖ.ಎಂಪಿಡಿ.ಸಂ. /07.01.279 / 2006–07 ಜುಲೈ 2, 2007
ಆಶಾಢ 11, 1929(ಎಸ್)

ಎಲ್ಲ ಅನುಸೂಚಿತ ಬ್ಯಾಂಕುಗಳ (ಆರ್.ಆರ್.ಬಿಗಳನ್ನು ಹೊರತು ಪಡಿಸಿ)
ಅಧ್ಯಕ್ಷರು / ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಮಾನ್ಯರೆ

**ರಫ್ತುಸಾಲ ಮರುಹಣಕಾಸು ಸೌಲಭ್ಯದ ಬಗ್ಗೆ (ಇಸಿಆರ್) ಪ್ರಧಾನ ಸುತ್ತೋಲೆ**

ರಫ್ತು ಸಾಲ ಮರುಹಣಕಾಸು ಸೌಲಭ್ಯದ ಬಗ್ಗೆ ಪರಿಷ್ಕರಿಸಿದ ಪ್ರಧಾನ ಸುತ್ತೋಲೆಯನ್ನು ಲಗತ್ತಿಸಲಾಗಿದೆ ಮತ್ತು ಇದರಲ್ಲಿ ದಿನಾಂಕ 30 ಜೂನ್, 2007ರ ತನಕ ನೀಡಿದ ಎಲ್ಲ ಸೂಚನೆಗಳು / ಮಾರ್ಗದರ್ಶಿ ಸೂತ್ರಗಳನ್ನು ಕ್ರೋಢೀಕರಿಸಿ ನೀಡುತ್ತದೆ. ಈ ಪ್ರಧಾನ ಸುತ್ತೋಲೆಯನ್ನು ಭಾರತೀಯ ರಿಸರ್ವ್ ಬ್ಯಾಂಕಿನ ವೆಬ್‌ತಾಣ (www.rbi.org.in) ದಲ್ಲೂ ಲಭ್ಯವಿದೆ. ಈ ವಿಷಯದ ಬಗ್ಗೆ ಜುಲೈ 13, 2006ರಿಂದ ಜೂನ್ 30, 2007ರ ಅವಧಿಯಲ್ಲಿ ನೀಡಿದ ಸೂಚನೆಗಳು, ಮಾರ್ಗದರ್ಶಿ ಸೂತ್ರಗಳನ್ನು ಪ್ರತ್ಯೇಕವಾಗಿ ಪರಿಶಿಷ್ಟದಲ್ಲಿ ನೀಡಲಾಗಿದೆ.

ತಮ್ಮ ವಿಧೇಯ

(ಎಂ.ಡಿ. ಪಾತ್ರಾ)
ಸಲಹಾಕಾರರು – ಪ್ರಭಾರಿ

**ರಫ್ತುಸಾಲ ಮರುಹಣಕಾಸು ಸೌಲಭ್ಯದ ಬಗ್ಗೆ (ಇಸಿಆರ್) ಪ್ರಧಾನ ಸುತ್ತೋಲೆ**

**ಪರಿವಿಡಿ**


| | |
|---|---|
| 1. | ಪ್ರಸ್ತಾವನೆ |
| 2. | ಪಾಲುದಾರರು |
| 3. | ಮಿತಿ |
| 4. | ಬಡ್ಡಿ ದರ |
| 5. | ಮಾರ್ಜಿನ್‌ನ ಅವಶ್ಯಕತೆ |
| 6. | ಅವಧಿ |
| 7. | ಸಹ ಭದ್ರತೆ |
| 8. | ಪಡೆಯುವಿಕೆಯ ಕನಿಷ್ಟ ಮೊತ್ತ |
| 9. | ಪಡೆಯುವಿಕೆಯ ಸ್ಥಳ |
| 10. | ಮರುಪಾವತಿ |
| 11. | ದಂಡ |
| 12. | ದಾಖಲೀಕರಣ |
| 13. | ವರದಿ ಮಾಡುವ ಅಗತ್ಯತೆ |
| 14. | ಶರತ್ತುಗಳು |
| 15. | ಅನುಬಂಧಗಳು<br>1. ವರದಿ ಮಾಡುವ ನಮೂನೆಗಳು<br>2. ವ್ಯಾಖ್ಯಾನ<br>3. ನಮೂನೆಗಳು |
| 16. | ಪರಿಶಿಷ್ಟ : ಸುತ್ತೋಲೆಗಳ ಪಟ್ಟಿ |

## ರಫ್ತುಸಾಲ ಮರುಹಣಕಾಸು ಸೌಲಭ್ಯದ ಬಗ್ಗೆ (ಇಸಿಆರ್) ಪ್ರಧಾನ ಸುತ್ತೋಲೆ

### 1. ಪ್ರಸ್ತಾವನೆ

**1.1.** ಹೆಚ್ಚು ಉದಾರ ರಫ್ತು ಸಾಲವನ್ನು ಬ್ಯಾಂಕುಗಳು ನೀಡುವುದನ್ನು ಪ್ರೋತ್ಸಾಹಿಸುವ ಸಲುವಾಗಿ, ಭಾರತೀಯ ರಿಸರ್ವ್ ಬ್ಯಾಂಕ್ ಕಾಯಿದೆ, 1934 ರ 17(3ಎ) ಪ್ರಕರಣದಡಿ ಬ್ಯಾಂಕುಗಳಿಗೆ ರಫ್ತು ಸಾಲದ ಮರುಹಣಕಾಸು ಸೌಲಭ್ಯವನ್ನು ಭಾರತೀಯ ರಿಸರ್ವ್ ಬ್ಯಾಂಕ್ ನೀಡುತ್ತದೆ. ಸಾಗಣೆ–ಪೂರ್ವ ಮತ್ತು ಸಾಗಣೆ–ನಂತರದ ಹಂತಗಳಲ್ಲಿ, ಬ್ಯಾಂಕಿನ ರೂಪಾಯಿ ರಫ್ತು ಸಾಲದ ಅರ್ಹ ಬಾಕಿಯ ಆಧಾರದ ಮೇಲೆ ಈ ಸೌಲಭ್ಯ ನೀಡಲಾಗುತ್ತದೆ. ಮರುಹಣಕಾಸು ನೀಡಿಕೆ ಪ್ರಮಾಣವನ್ನು ಆಗಿಂದಾಗ್ಗೆ ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ಮತ್ತು ಸಾಲ ನೀತಿ ರೂಪರೇಷೆಯ ಆಧಾರದ ಮೇಲೆ ಆಗಾಗ ನಿಗದಿಗೊಳಿಸಲಾಗುತ್ತದೆ.

### 2. ಭಾಗಿವಹಿಸುವವರು

**2.1** ವಿದೇಶಿ ವಿನಿಮಯದಲ್ಲಿ ಅಧಿಕೃತ ಡೀಲರುಗಳಾಗಿದ್ದು, ರಫ್ತು ಸಾಲ ನೀಡಿರುವ ಎಲ್ಲಾ ಅನುಸೂಚಿತ ಬ್ಯಾಂಕುಗಳು(ಆರ್ ಆರ್ ಬಿ ಗಳನ್ನು ಹೊರತುಪಡಿಸಿ) ರಫ್ತು ಸಾಲದ ಮರುಸಾಲ ಸೌಲಭ್ಯವನ್ನು ಉಪಯೋಗಿಸಿಕೊಳ್ಳಲು ಅರ್ಹರಾಗಿರುತ್ತಾರೆ.

### 3. ಮಿತಿ

ಪ್ರಸ್ತುತ, ಅನುಸೂಚಿತ ಬ್ಯಾಂಕುಗಳಿಗೆ ಮರುಸಾಲದ ಅರ್ಹತೆಯಿರುವ ತಮ್ಮ ಎರಡನೇ ಹಿಂದಿನ ಪಾಕ್ಷಿಕದ ಕೊನೆಯಲ್ಲಿ ಬಾಕಿಯಿರುವ ರಫ್ತು ಸಾಲದ ಶೇ.15ರಷ್ಟನ್ನು ರಫ್ತು ಸಾಲದ ಮರುಸಾಲವಾಗಿ ನೀಡಲಾಗುತ್ತದೆ. ಮರುಸಾಲಕ್ಕಾಗಿ, ಬಾಕಿ ಅರ್ಹತೆಯಿರುವ ರಫ್ತು ಸಾಲದ ವಿವರಣೆಯನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

### 4. ಬಡ್ಡಿದರ

**4.1** ರಫ್ತು ಸಾಲದ ಮರುಸಾಲ ಸೌಲಭ್ಯವು ಆಗಾಗ ಘೋಷಿಸುವ ರೆಪೋ ದರ (ಲಿಕ್ವಿಡಿಟಿ ಅಡ್ಜಸ್ಟ್‌ಮೆಂಟ್ ಸೌಲಭ್ಯ (ಎಲ್ ಎ ಎಫ್) ದ ಅಡಿ ಇರುವ ರಿವರ್ಸ್ ರೆಪೊ ದರಕ್ಕೆ ಸಂಯೋಜನೆಗೊಂಡಿರುವ) ಅಧಾರದ ಮೇಲೆ ದೊರೆಯುತ್ತದೆ.

**4.2** ಮಾಸಿಕ ವಿರಾಮಗಳೊಂದಿಗೆ ಬಡ್ಡಿಯನ್ನು ಪಾವತಿಸಬೇಕಿದ್ದು, ಅಂತಹ ಬಡ್ಡಿಯ ಮೊತ್ತವು ದಿನದ ಉಳಿಕೆಯ ಮೇಲೆ ನಿರ್ಣಯಿಸಿ, ಸಂಬಂಧಪಟ್ಟ ತಿಂಗಳ ಕೊನೆಯಲ್ಲಿ ಅಥವಾ ಬಾಕಿ ಇರುವ ಸಾಲ ತೀರಿದಲ್ಲಿ ಮುಂದಾಗಿ ಅಂತಹ ಸಾಲ ಖಾತೆಗೆ ಖರ್ಚು ಹಾಕಿಕೊಳ್ಳಬಹುದು.

### 5. ಮಾರ್ಜಿನ್‌ನ ಅವಶ್ಯಕತೆ

**5.1..** ಯಾವುದೇ ಮಾರ್ಜಿನ್ ಇಡುವ ಅಗತ್ಯವಿರುದಿಲ್ಲ

### 6. ಕಾಲಾವಧಿ

**6.1**. ನೂರಾ ಎಂಬತ್ತು ದಿನಗಳಿಗೂ ಮೀರದಂತೆ ಬೇಡಿಕೆ ಬಂದಾಗ ಅಥವಾ ನಿಶ್ಚಿತ ಅವಧಿಗಳು ಮುಗಿದ ಮೇಲೆ, ಮರುಪಾವತಿ ಮಾಡಬೇಕು.

## 7. ಸಹಭದ್ರತೆ

**7.1.** ಬ್ಯಾಂಕುಗಳ ಡಿಮ್ಯಾಂಡ್ ಪ್ರಾಮಿಸರಿ ನೋಟುಗಳ ಮೇಲೆ , ರಫ್ತು ಸಾಲದ ಮರುಸಾಲವನ್ನು ಆರ್‌ಬಿಐ ನೀಡುತ್ತದೆ. ಆದರೆ ಈ ಸೌಲಭ್ಯಕ್ಕಾಗಿ, ಅವುಗಳು, ರಫ್ತು ಸಾಲವನ್ನು ನೀಡಿದ ಬಗ್ಗೆ ಘೋಷಣಾ ಪತ್ರ ನೀಡಬೇಕು ಮತ್ತು ಮರುಸಾಲಕ್ಕಾಗಿ ಅರ್ಹ ಮೊತ್ತದ ಬಾಕಿಯು ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಪಡೆದಿರುವ ಸಾಲ/ಮುಂಗಡಕ್ಕಿಂತ ಕಡಿಮೆ ಇರಬಾರದು.

## 8. ಪಡೆಯುವಿಕೆಯ ಕನಿಷ್ಟ ಮೊತ್ತ

ಈ ಸೌಲಭ್ಯದ ಅಡಿ, ಪಡೆಯುವಿಕೆಯ ಕನಿಷ್ಟ ಮೊತ್ತವು, ರೂಪಾಯಿ ಒಂದು ಲಕ್ಷ ಮತ್ತು ಅದರ ಗುಣಕಗಳಾಗಿರುತ್ತವೆ.

## 9. ಪಡೆಯುವಿಕೆಯ ಸ್ಥಳ

**9.1** ಬ್ಯಾಂಕಿಂಗ್ ಇಲಾಖೆ ಇರುವ ಭಾರತೀಯ ರಿಸರ್ವ್ ಬ್ಯಾಂಕಿನ ಎಲ್ಲ ಕೇಂದ್ರಗಳಲ್ಲೂ ಈ ಸೌಲಭ್ಯವನ್ನು ಪಡೆಯಬಹುದು.

## 10. ಮರುಪಾವತಿ

**10.1** ಬೇಡಿಕೆ ಬಂದಾಗ ಅಥವಾ 180 ದಿನಗಳೊಳಗಾಗಿ, ಮರುಸಾಲವನ್ನು ಹಿಂತಿರುಗಿಸಬೇಕು.

## 11. ದಂಡ

**11.1.** ರಫ್ತು ಸಾಲದ ಮರುಸಾಲದ ಅನಿಯಮಿತ ಪಡೆಯುವಿಕೆ ಹೊಂದಿರುವ ಅನುಸೂಚಿತ ಬ್ಯಾಂಕುಗಳ ಪ್ರಕರಣದಲ್ಲಿ, ರಿಸರ್ವ್ ಬ್ಯಾಂಕ್ ಕಾಲಕಾಲಕ್ಕೆ ನಿರ್ಣಯಿಸುವ ದಂಡ ಬಡ್ಡಿದರವನ್ನು ಬಾಕಿ ಇರುವ ಸಾಲ ಅಥವಾ ಸಾಲಗಳ ಮೇಲೆ ವಿಧಿಸಲಾಗುವುದು.

**11.2** ರಫ್ತು ಸಾಲ ಮರುಸಾಲದ ಅನಿಯಮಿತ ಪಡೆಯುವಿಕೆಗೆ ದಂಡನೆ ದರದ ಅನ್ವಯಿಸುವಿಕೆಯ ನಿದರ್ಶನಗಳನ್ನು ಪಟ್ಟಿ–1 ರಲ್ಲಿ ನೀಡಲಾಗಿದೆ.

| **ಪಟ್ಟಿ–1** | **ರಫ್ತು ಸಾಲ ಮರುಸಾಲ ನೀಡಿಕೆಯ ಅನಿಯಮಿತ ಪಡೆಯುವಿಕೆ ದೃಷ್ಟಾಂತಗಳು** |
|---|---|
| (ಎ) | ಈಸಿಆರ್ ನ ಬಳಕೆಯು ಒಟ್ಟು ಮಿತಿಯನ್ನು ಮೀರಿರುವುದು |
| (ಬಿ) | ಬ್ಯಾಂಕುಗಳಿಂದ ಮರುಸಾಲದ ಮಿತಿಯ ಬಗ್ಗೆ ತಪ್ಪು ಲೆಕ್ಕಚಾರ/ವರದಿ |
| (ಸಿ) | 180 ದಿನಗಳೊಳಗೆ ಮರುಸಾಲ ಮರುಪಾವತಿ ಮಾಡದಿರುವುದು |
| (ಡಿ) | ಬ್ಯಾಂಕುಗಳಿಂದ ಮಿತಿ ಮೀರಿದ ಬಳಕೆಯನ್ನು ವರದಿ ಮಾಡುವಲ್ಲಿ ವಿಳಂಬ |

**12. ದಾಖಲೀಕರಣ**

**12.1** ರಫ್ತು ಸಾಲ ಮರುಸಾಲದ ಸೌಲಭ್ಯವನ್ನು ಪಡೆಯಲು ಬ್ಯಾಂಕುಗಳು ಕೆಳಕಂಡ  ದಾಖಲೆಗಳನ್ನು ಸಲ್ಲಿಸಬೇಕು.(ಅನುಬಂಧ–II)

ಎ. ನಮೂನೆ ಸಂ. **ಡಿಎಡಿ. 297** ರಲ್ಲಿ ಮುದ್ರಾಂಕಿತ ಒಪ್ಪಂದ.

ಬಿ. ನಮೂನೆ ಸಂ. **ಡಿಎಡಿ. 295ಎ** ಯಲ್ಲಿ ಡಿಮ್ಯಾಂಡ್ ಪ್ರಾಮಿಸ್ಸರಿ ನೋಟ್(ಡಿಪಿಎನ್)

ಸಿ. ಯೋಜನೆಯಡಿ ಸಾಲ ಪಡೆಯಲು ಮತ್ತು ಬ್ಯಾಂಕಿನ ಪರವಾಗಿ ಸಾಲ ದಾಖಲೆಗಳನ್ನು ಸಲ್ಲಿಸುವ ಅಧಿಕಾರಿಗಳನ್ನು ಅಧಿಕೃತಗೊಳಿಸುವ ಬಗ್ಗೆ ನಮೂನೆ ಸಂ. **ಡಿಎಡಿ 298** ಯಲ್ಲಿ ಮಂಡಳಿಯ ನಿರ್ಣಯ.

ಡಿ. ಮಿತಿಯ ಏರಿಸುವಿಕೆಗಾಗಿ, ನಮೂನೆ ಸಂ.**ಡಿಎಡಿ 299** ರಲ್ಲಿ ಒಂದು ಪತ್ರದ ಮೂಲಕ ಹೊಸ ಮಿತಿಯ ಬಗ್ಗೆ ಕ್ರೋಢೀಕರಿಸಿದ ಡಿಪಿಎಸ್ ಜತೆಗೆ ಏರಿಸಿದ ಮಿತಿಯ ವಿವರಗಳಿಗಾಗಿ ಒಪ್ಪಂದದ ವಿಸ್ತರಣೆ.

ಇ. ಬ್ಯಾಂಕಿಂಗ್ ಇಲಾಖೆಯ ಮ್ಯಾನುಯಲ್‌ನ ಪ್ಯಾರಾ. 7.30 ರ ನಿಯಮದಡಿ, ಅಲ್ಲಿ ಸೂಚಿತವಾಗಿರುವ ನಿಯಮಗಳಲ್ಲಿ ಬದಲಾವಣೆ ಮಾಡದಿರುವತನಕ ಒಪ್ಪಂದಗಳನ್ನು ಮತ್ತು ವಿಸ್ತರಣೆಯ ಪತ್ರಗಳನ್ನು ಮತ್ತೊಮ್ಮೆ ನವೀಕರಿಸಬೇಕಾಗಿಲ್ಲ. ಆದರೂ, ವಹಿವಾಟಿನ ದಿನಾಂಕದಿಂದ ಮೂರು ವರ್ಷದ ಊರ್ಜಿತತ್ವವನ್ನು ಗಣನೆಗೆ ತಾರದೆ, ಅವರ ಒಪ್ಪಂದದ ದಿನಾಂಕದಿಂದ ಪ್ರತಿ ಮೂರು ವರ್ಷಕ್ಕೊಮ್ಮೆ, ಡಿಪಿಎಸ್ ಅನ್ನು ನವೀಕರಿಸಬೇಕು.

**12.2** ಬಾಕಿ ಇರುವ ರಫ್ತು ಸಾಲದ ಮುಂಗಡಗಳ ಸಂಬಂಧ, ಈ ಯೋಜನೆಯಡಿ ಬಾಕಿ ಇರುವ ಸಾಲಗಳ ಸ್ಥಿತಿಗತಿಗಳನ್ನು ಪರಿವೀಕ್ಷಿಸಲು, ಭಾರತೀಯ ರಿಸರ್ವ್ ಬ್ಯಾಂಕಿಗೆ ಸಹಾಯಕವಾಗಲು, ಸಾಲ ಪಡೆದ ಬ್ಯಾಂಕು, ನಮೂನೆ ಸಂ. ಡಿಎಡಿ 389 ರಲ್ಲಿ ಪಾಕ್ಷಿಕ ಪ್ರಮಾಣಪತ್ರವನ್ನು, ನಮೂನೆ ಸಂ 390 ರಲ್ಲಿ ಎಕ್ಸ್ ಪೋರ್ಟ್ ರೀಫೈನಾನ್ಸ್ ಎನ್‌ಟೈಟಲ್‌ಮೆಂಟ್ ವಿವರ ಪಟ್ಟಿಯ ಜತೆಗೆ, ಮಾನಿಟರಿ ಪಾಲಿಸಿ ಇಲಾಖೆ, ಭಾರತೀಯ ರಿಸರ್ವ್ ಬ್ಯಾಂಕಿಗೆ ಸಲ್ಲಿಸಬೇಕು.

**13. ವರದಿ ಮಾಡುವ ಅಗತ್ಯತೆ**

**13.1** ಈ ಸೌಲಭ್ಯವನ್ನು ಪಡೆಯುವ ಬ್ಯಾಂಕುಗಳು, ಅನುಬಂಧ 3 ರಲ್ಲಿ ಸೂಚಿಸಿರುವ ನಮೂನೆಯಲ್ಲಿ, ಸಂಬಂಧಪಟ್ಟ ದಿನಾಂಕದಿಂದ ಐದು ದಿನಗಳೊಳಗೆ, ಅವುಗಳ ಮರುಸಾಲ ನೀಡಿಕೆಗೆ ಅರ್ಹವಿರುವ ಬಾಕಿ ರಫ್ತುಸಾಲದ ಬಗ್ಗೆ ವರದಿ ಮಡಬೇಕು.

**14. ಷರತ್ತು**

14.1 ಸಾಲ ಪಡೆದ ಬ್ಯಾಂಕುಗಳು ತಮ್ಮ ಇತ್ತೀಚಿನ ಹೇಳಿಕೆಯಲ್ಲಿ ವರದಿಮಾಡಿದಂತೆ, ತಮ್ಮ ರಫ್ತುಬಿಲ್ಲುಗಳ ಇಟ್ಟುಕೊಳ್ಳುವಿಕೆ/ ಅರ್ಹವಾದ ಸರಕು  ರವಾನೆಪೂರ್ವ ಸಾಲದ ಮೊತ್ತಗಳು ಎಲ್ಲ ಸಂದರ್ಭದಲ್ಲೂ ಬಾಕಿ ಇರುವ ಸಾಲಗಳನ್ನು ಪೂರ್ತಿಯಾಗಿ ಒಳಗೊಂಡಿರುವಂತೆ ನೋಡಿಕೊಳ್ಳುವುದು ಅಗತ್ಯ.

## 15. ಅನುಬಂಧಗಳು

**15.1** ರಫ್ತುಸಾಲದ ಮರುಸಾಲ ನೀಡಿಕೆ ಸೌಲಭ್ಯಕ್ಕೆ ಸಂಬಂಧಪಟ್ಟ ಅರ್ಥ ನಿರೂಪಣೆ, ಒಪ್ಪಂದಗಳ ನಮೂನೆಗಳು, ವರದಿ ನಮೂನೆಗಳನ್ನು – ಕ್ರಮವಾಗಿ ಅನುಬಂಧ I, ಅನುಬಂಧ II ಮತ್ತು ಅನುಬಂಧ III ರಲ್ಲಿ ಪಟ್ಟಿ ಮಾಡಲಾಗಿದೆ.

## 16. ಪರಿಶಿಷ್ಟ (ಅಪೆಂಡಿಕ್ಸ್)

**16.1** ರಫ್ತು ಸಾಲ ಮರುಸಾಲ ನೀಡಿಕೆ ಸೌಲಭ್ಯಕ್ಕೆ ಸಂಬಂಧಪಟ್ಟಂತೆ, ಭಾರತೀಯ ರಿಸರ್ವ್ ಬ್ಯಾಂಕ್ ಹೊರಡಿಸಿದ ಎಲ್ಲಾ ಸುತ್ತೋಲೆಗಳು 'ಪರಿಶಿಷ್ಟ'(ಅಪೆಂಡಿಕ್ಸ್)ನಲ್ಲಿ ಪಟ್ಟಿಮಾಡಲಾಗಿದೆ.

### ಅನುಬಂಧ – I

### ವ್ಯಾಖ್ಯಾನಗಳು

ಬೇರೊಂದು ರೀತಿಯಲ್ಲಿ ವ್ಯಾಖ್ಯಾನ ಬೇಕಿರದಿದ್ದಲ್ಲಿ, ಈ ಮಾರ್ಗಸೂಚಿಯಲ್ಲಿ ಈ ಕೆಳಕಂಡಂತೆ ತಿಳಿದುಕೊಳ್ಳಬಹುದು.

**(i)**'ಪಾಕ್ಷಿಕ' ಎಂದರೆ ಶನಿವಾರದಿಂದ ಮುಂದೆ ಬರಲಿರುವ ಎರಡನೇ ಶುಕ್ರವಾರದವರೆಗೆ, ಎರಡೂ ದಿನವೂ ಸೇರಿ ಇರುವ ಕಾಲಾವಧಿ.

**(ii)** 'ಬ್ಯಾಂಕು' ಅಥವಾ 'ಬ್ಯಾಂಕಿಂಗ್ ಸಂಸ್ಥೆ' ಎಂದರೆ , ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949(1949 ರ 10) ರ ಪ್ರಕರಣ 5 ರ ಖಂಡ(ಸಿ) ಯಲ್ಲಿರುವಂತೆ ಅಥವಾ ಅಲ್ಲಿಯೆ, ಖಂಡ (ಡಿಎ), ಖಂಡ(ಎನ್‌ಸಿ) ಮತ್ತು (ಎನ್‌ಡಿ) ಯಲ್ಲಿ ಅನುಕ್ರಮವಾಗಿ " ಅನುಗುಣವಾಗಿರುವ ಹೊಸ ಬ್ಯಾಂಕು", ಭಾರತೀಯ ಸ್ಟೇಟ್ ಬ್ಯಾಂಕ್" ಅಥವಾ 'ಸಹವರ್ತಿ ಬ್ಯಾಂಕು' ಮತ್ತು ಅದೇ ಕಾಯ್ದೆಯ ಪ್ರಕರಣ 56 ರ ಜತೆಗೆ ಓದಿಕೊಂಡಂತೆ ಪ್ರಕರಣ 5 ರ – ಖಂಡ(ಸಿಸಿಐ) ದಲ್ಲಿ ನಿರೂಪಿಸಿರುವ "ಸಹಕಾರಿ ಬ್ಯಾಂಕ"ನ್ನು ಸೇರಿದಂತೆ, ಎಂದು ತಿಳಿದುಕೊಳ್ಳಬೇಕು.

**(iii)** "ಅನುಸೂಚಿತ ಬ್ಯಾಂಕು" ಎಂದರೆ ಭಾರತೀಯ ರಿಸರ್ವ್ ಬ್ಯಾಂಕ್ ಕಾಯ್ದೆ 1934 ರ ಎರಡನೇ ಷೆಡ್ಯೂಲ್ ನಲ್ಲಿ ಸೇರಿಸಲ್ಪಟ್ಟಿರುವ ಬ್ಯಾಂಕು.

**(iv)**'ರಫ್ತುಬಿಲ್ಲುಗಳು' ಎಂದರೆ 180 ದಿನ ಮೀರದ ಕಾಲಾವಧಿಯ, ಸಾಲ ಪಡೆದ ಬ್ಯಾಂಕು ಖರೀದಿಸಿದ /ವ್ಯವಹರಿಸಿದ/ ರಿಯಾಯಿತಿ ನೀಡಿದ ಎಲ್ಲಾ ರಫ್ತು ಬಿಲ್ಲುಗಳು. ಈ ಬಿಲ್ಲುಗಳು ಉದರಿ ಪತ್ರಗಳು ಅಥವಾ ಅದೇ ರೀತಿಯ ಆಧಾರದ ಮೇಲೆ ಭಾರತದಲ್ಲಿ ಅಥವಾ ಅಂತರಾಷ್ಟ್ರೀಯ ಹಣಕಾಸು ನಿಧಿ(ಐಎಂಎಫ಼್)ನ ಸದಸ್ಯರಾಗಿರುವ ಭಾರತದ ಹೊರಗಿನ ದೇಶದಲ್ಲಿ ಅಥವಾ ಭಾರತದ ಗೆಜೆಟ್‌ನಲ್ಲಿ ಈ ಕುರಿತು ಬ್ಯಾಂಕ್ ಪ್ರಕಟಿಸಿದ ಇನ್ನಾವುದೇ ದೇಶದಲ್ಲಿ ಪಡೆದಿರಬೇಕು, ಹಾಗು ತಾನು ನೀಡುವ ಘೋಷಣ ಪತ್ರದಲ್ಲಿ ಸೇರಿಸಲು ಇವುಗಳು ಅರ್ಹವಾಗಿರುತ್ತವೆ.

**(v)** "ಸರಕು ರವಾನೆ ಪೂರ್ವ ಸಾಲ" ಎಂದರೆ, ವಿಶ್ವಾಸಾರ್ಹ ರಫ್ತುದಾರರಿಗೆ, ಬ್ಯಾಂಕುಗಳು ನೀಡಿದ ಸಾಲಗಳು ಹಾಗು ಇದನ್ನು ಸ್ಥಳೀಯ ರಫ್ತುದಾರನ ಪರವಾಗಿ, ವಿದೇಶದಲ್ಲಿ ಉತ್ತಮ ನಡಾವಳಿ ಹೊಂದಿರುವ ಬಗ್ಗೆ ಬ್ಯಾಂಕುಗಳು ಸಾಲಪತ್ರಗಳ (ಲೆಟರ್ ಆಫ಼್ ಕ್ರೆಡಿಟ್) ಮೂಲಕ ನೀಡಿರುವ ಸಮರ್ಥನೆಯ ಆಧಾರದ ಮೇಲೆ ಅಥವಾ ರಫ್ತಿನ ವಿಶ್ವಾಸಾರ್ಹ ದರ್ಜೆಯ ಮೇಲೆ ನಿರ್ಧರಿಸಲ್ಪಟ್ಟಿದ್ದು, ಈ ಕುರಿತು ಸೂಕ್ತ ದಾಖಲೆಗಳು ಲಭ್ಯವಾಗಿರುವ ಬಗ್ಗೆ ಸಾಲ ಪಡೆವ ಬ್ಯಾಂಕುಗಳು ಖಚಿತಪಡಿಸಿಕೊಳ್ಳಬೇಕು.

(vi)'ಮರು ಹಣಕಾಸು ಸೌಲಭ್ಯಕ್ಕೆ ಅರ್ಹವಾಗುವ ರಫ್ತುಸಾಲ' ಎಂದರೆ, ವರದಿ ಮಾಡುವ ಪಾಕ್ಷಿಕದ ಹಿಂದಿನ ಎರಡನೇ ಪಾಕ್ಷಿಕದ ಕೊನೆಯ ಶುಕ್ರವಾರದಂದು ಬಾಕಿ ಇರುವ ಸರಾಸರಿ ರಫ್ತುಸಾಲದಲ್ಲಿ ವಿದೇಶಿ ಕರೆನ್ಸಿಯಲ್ಲಿರುವ ಹಡಗುಗಳ ಸರಕಿನ ರವಾನೆ ಪೂರ್ವ ಸಾಲದಿಂದ (ಪಿಸಿಎಫ್‌ಸಿ), ವಿದೇಶದಲ್ಲಿ ರಫ್ತು ಬಿಲ್ಲುಗಳ ಮರು ಸೋಡಿಯ ಯೋಜನೆಯಡಿ ಸೋಡಿ ಮಾಡಿದ / ಮರು ಸೋಡಿ ಮಾಡಿದ ರಫ್ತು ಬಿಲ್ಲುಗಳು ( ಈಬಿಆರ್), ಮರು ಸಾಲಕ್ಕೆ ಅನರ್ಹವೆನಿಸದ ಅವಧಿ ಮೀರಿದ ಬಾಕಿ ರೂಪಾಯಿ ರಫ್ತು ಸಾಲ ಮತ್ತು ಇತರ ರಫ್ತು ಸಾಲ, ಇತರ ಬ್ಯಾಂಕುಗಳು/ ಎಕ್ಸಿಮ್ ಬ್ಯಾಂಕು/ ಹಣಕಾಸು ಸಂಸ್ಥೆಗಳಲ್ಲಿ ಮರು ಸೋದಿ ಮಾಡಿದ ರಫ್ತು ಬಿಲ್ಲುಗಳು ಮತ್ತು ನಬಾರ್ಡ್ / ಎಕ್ಸಿ ಮ್ ಬ್ಯಾಂಕುಗಳ ಮರುಸಾಲದ ಅಧಾರದ ಮೇಲೆ ನೀಡಿದ ರಫ್ತು ಸಾಲಗಳು ಇವುಗಳನ್ನು ಕಳೆದು ಬರುವ ರಫ್ತು ಸಾಲ ಎಂದು ತಿಳಿದುಕೊಳ್ಳತಕ್ಕದ್ದು.

**ಅನುಬಂಧ –2**

**ಒಪ್ಪಂದದ ನಮೂನೆ**

**ಡಿಎಡಿ 297**
**ಪ್ಯಾರಾ. 7.50**

ಸರಕುಗಳ ರಫ್ತಿಗಾಗಿ, ಬ್ಯಾಂಕಿನ ಹಣಕಾಸು ನೆರವಿನ ಕುರಿತು ಅನುಸೂಚಿತ ಬ್ಯಾಂಕಿನ ಪ್ರಧಾನ ಕಚೇರಿಯಿಂದ ಸಾಲ ಪಡೆಯಲು ತೆಗೆದುಕೊಳ್ಳಬೇಕಾದ ಒಪ್ಪಂದದ ನಮೂನೆ.(ಪ್ರತಿ ರಾಜ್ಯದಲ್ಲಿ ಜಾರಿಯಲ್ಲಿರುವ ಕಾನೂನಿಗೆ ಅನುಗುಣವಾಗಿ ಮುದ್ರಾಂಕಿತಗೊಂಡಿರುವ ಒಪ್ಪಂದದಂತೆ)

ಭಾರತೀಯ ರಿಸರ್ವ್ ಬ್ಯಾಂಕ್,

ಮಾನ್ಯರೆ,

ಕಾಲಕಾಲಕ್ಕೆ ತಾವು ನಿರ್ಧರಿಸುವಂತೆ, ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ ಮತ್ತು ಸುತ್ತೋಲೆ ಸಂಖ್ಯೆ ಡಿ.ಬಿ.ಓ.ಡಿ. ನಂ. ಬಿ.ಎಮ್ 78/ಸಿ.297(ಎಮ್)–69 ದಿನಾಂಕ ಜನವರಿ 20, 1969ರ ಜೊತೆ ಲಗತ್ತಿಸಿರುವ ವಿವರಣಾ ಪತ್ರದಲ್ಲಿ ನಮೂದಿಸಿರುವ ಷರತ್ತು / ನಿಬಂಧನೆಗಳಡಿಯಲ್ಲಿ, ಮುಂಗಡಗಳು ತಮ್ಮ ವಿವೇಚನೆಯಲ್ಲಿಯೇ ಇರುವುದು. ಆದರೆ, ಯಾವುದೇ ಸಂದರ್ಭದಲ್ಲೂ ರೂ............,(ಬಡ್ಡಿಯನ್ನು ಹೊರತು ಪಡಿಸಿ) ಮೀರಬಾರದು ಮತ್ತು ಮುಂದೆ ತಿಳಿಸಿರುವ ಬಡ್ಡಿಯನ್ನು ಹೊಂದುವ ಈ ಮೊತ್ತಕ್ಕೆ ನಿಮ್ಮ ಹೆಸರಿಗೆ ಬರೆದ ಡಿಮ್ಯಾಂಡ್ ಪ್ರಾಮಿಸರಿ ನೋಟನ್ನು ನಿಮಗೆ ನಾವು ರವಾನಿಸಿದ್ದೇವೆ, ಹಾಗೂ ಈ ಮುಂಗಡವು, ನಮ್ಮನ್ನು ಪಾವತಿಸಲು ಒತ್ತಾಯಿಸಿದಾಗ ಮರುಪಾವತಿಸುತ್ತೇವೆ ಮತ್ತು ನೀವು ನಿರ್ದಿಷ್ಟ ಪಡಿಸುವಂತಹ ನಮೂನೆಗಳಲ್ಲಿ ಘೋಷಿಸುತ್ತೇವೆ.

ನಾವು ಈ ಕೆಳಗಿನಂತೆ ಒಪ್ಪಿಕೊಳ್ಳುತ್ತೇವೆ.

(1) ತಾವು ಇಚ್ಛಿಸಿದಾಗ, ಯಾವುದೇ ಸಮಯದಲ್ಲಿ ಸಂಬಂಧಿತ ಸಾಲಗಳ ಶಿಲ್ಕಿನ ಬಾಕಿಯನ್ನು ಮರುಪಾವತಿಸುತ್ತೇವೆ.

(2) ಈ ಒಪ್ಪಂದದಲ್ಲಿನ ಪ್ರತಿ ಸಾಲಗಳು 180 ದಿನಗಳು ಮೀರದ ವಾಯಿದೆಯನ್ನು ಹೊಂದಿದ್ದು, ಆ ಕಾಲಾವಧಿಯೊಳಗೆ ನಾವು ಮರುಪಾವತಿಸುತ್ತೇವೆ.

(3) ತಾವು ಆಗಿಂದಾಗ್ಗೆ, ಪ್ರಕಟಿಸುವ ದರದ ಪ್ರಕಾರ, ನಾವು ಬಡ್ಡಿಯನ್ನು ಮಾಸಿಕ ವಿರಾಮಗಳಲ್ಲಿ ತಮಗೆ ಪಾವತಿಸುತ್ತೇವೆ ಮತ್ತು ಸಂಬಂಧಪಟ್ಟ ತಿಂಗಳ ಕೊನೆಗೆ ಅಥವಾ ಬಾಕಿ ಶಿಲ್ಕು ತೀರಿದಾಗ ಮುಂದಾಗಿ, ದೈನಂದಿನ ಬಾಕಿಯ ಮೇಲೆ, ಲೆಕ್ಕಾಚಾರ ಹಾಕಿದ ಅಂತಹ ಬಡ್ಡಿಯ ಮೊತ್ತವನ್ನು ಆ ಸಾಲಗಳ ಖಾತೆಗೆ ಖರ್ಚು ಹಾಕಿಕೊಳ್ಳಬಹುದಾಗಿದೆ. ನಿಮ್ಮಲ್ಲಿನ ನಮ್ಮ ಚಾಲ್ತಿ ಖಾತೆಗೆ ಖರ್ಚು ಹಾಕುವುದರ ಮೂಲಕ, ಬಡ್ಡಿಯ ಮೊತ್ತವನ್ನು ತಾವು ತುಂಬಿಕೊಳ್ಳುವುದು ತಮಗೆ ಬಿಟ್ಟಿರುವ ವಿಷಯವಾಗಿರುತ್ತದೆ.

(4) ಇಲ್ಲಿನ ಕಲಂ (1) ಮತ್ತು (2) ರ ಅಡಿಯ ನಿಯಮಗಳಡಿ ನಮ್ಮಿಂದ ಪಾವತಿ ಕಾರ್ಯದಲ್ಲಿ ಲೋಪವಾದರೆ, ನಿಮ್ಮ ಮೇಲಿನ ಯಾವುದೇ ಬಾಧ್ಯತೆಯಿಲ್ಲದೆ ಸದರಿ ಕಾಯ್ದೆಯ ಪ್ರಕರಣ 17(3ಎ) ಯಲ್ಲಿನ ನಿಯಮದಡಿ ನೀಡಿರುವ ಸಾಲದ ಸಂಬಂಧ ನಮ್ಮಿಂದ ಬಾಕಿ ಇರುವ ಮೊತ್ತವನ್ನು ನಮ್ಮ ಚಾಲ್ತಿ ಖಾತೆಗೆ ಖರ್ಚು ಹಾಕಿಕೊಳ್ಳಲು, ನಾವು ಒಪ್ಪಿಕೊಳ್ಳುತ್ತೇವೆ.

(5) ಯಾವುದೇ ಸಂದರ್ಭದಲ್ಲಿ, ಭಾರತದಿಂದ ಸರಕನ್ನು ರಫ್ತು ಮಾಡಲು ರಫ್ತುದಾರರಿಗೆ ಅಥವಾ ಇತರರಿಗೆ ನಾವು ನೀಡಿದ ಮರು ಸಾಲ ನೀಡಿಕೆಗೆ ಯೋಗ್ಯವಾದ ಸಾಲ ಅಥವಾ ಮುಂಗಡದ, ಪಡೆದ ಅಥವಾ ಬಾಕಿ ಇರುವ ಮೊತ್ತವು, ನಿಮ್ಮಿಂದ ನಾವು ಪಡೆದ ಸಾಲ ಅಥವಾ ಮುಂಗಡದ ಬಾಕಿ ಮೊತ್ತಕ್ಕಿಂತ ಕಡಿಮೆ ಇರದಂತೆ ಇರುವುದನ್ನು ನಾವು ಒಪ್ಪಿಕೊಳ್ಳುತ್ತೇವೆ ಹಾಗು ಪಾಲಿಸುತ್ತೇವೆ. ನೀವು ಆಗಿಂದಾಗ್ಗೆ, ನಿಗದಿಪಡಿಸುವ ಮಾರ್ಜಿನ್ ಕಾಪಾಡಿಕೊಳ್ಳಲು, ನಿಮ್ಮ ಹೆಸರಲ್ಲಿ ಸೂಕ್ತ ಮಾರ್ಜಿನ್‌ನ್ನು ಸದಾ ಇಟ್ಟುಕೊಳ್ಳಲು ಒಪ್ಪಿಕೊಳ್ಳುತ್ತೇವೆ. ನಿಗದಿಪಡಿಸಿದ ಮಾರ್ಜಿನ್ ಮೊತ್ತದ ಕೊರತೆಯನ್ನು ಸರಿದೂಗಿಸಲು, ನಿಮ್ಮ ಆದೇಶದ ಅನುಸಾರ, ಈ ಕೂಡಲೇ, ಬಾಕಿ ಮೊತ್ತವನ್ನು ನಗದು ಪಾವತಿ ಮಾಡುವ ಮೂಲಕ ಕಡಿಮೆ ಮಾಡುವುದಕ್ಕಾಗಿ ತುಂಬಿಕೊಡಲು ಸಹಾ ಒಪ್ಪಿಕೊಳ್ಳುತ್ತೇವೆ..

(6) ಈ ರೀತಿ ಮುಂಗಡಗಳು ಮುಂದುವರಿಯುವ ಅವಧಿಯಲ್ಲಿ, ಈ ಕುರಿತು ನಾವು ನೀಡಿರುವ ಮರುಸಾಲ ಪಡೆಯಲು ಅರ್ಹವಾದ ಸರಕುಗಳ ರಫ್ತು ಸಾಲದ ಮುಂಗಡ ಬಾಕಿಯ ಬಗ್ಗೆ ಮಾಹಿತಿಯನ್ನು ತಾವು ನಿರ್ದೇಶಿಸಿದಂತೆ ತಿಳಿಸಲು ಮತ್ತು, ಸಾಲಗಾರನ ಸಾಲ ತೀರಿಸುವ ಸಾಮರ್ಥ್ಯದ ಬಗ್ಗೆ ತಾವು ಆಗಾಗ ನಿಗದಿ ಪಡಿಸಿದಂತೆ ನೈಜ ವರದಿ ನೀಡಲು, ನಾವು ಒಪ್ಪಿಕೊಳ್ಳುವುದಲ್ಲದೆ , ನಮ್ಮ ಭದ್ರತೆಯನ್ನು ಬಾಧಿಸಬಹುದಾದಂತಹ ಸಾಲಗಾರನ ಸ್ಥಿತಿಗತಿಯ ಬದಲಾವಣೆಯ ಬಗ್ಗೆಯೂ ನಾವು ತ್ವರಿತವಾಗಿ ತಿಳಿಸಲು ಸಹ ಒಪ್ಪಿಕೊಳುತ್ತೇವೆ.

(7) ಮರು ಹಣಕಾಸು ಸೌಲಭ್ಯಕ್ಕೆ ಅರ್ಹವಿರುವ ವಸ್ತುಗಳ ರಫ್ತಿಗೆ ಸಂಬಂಧಿಸಿದಂತೆ ನಾವು ನೀಡಿದ ಮುಂಗಡಗಳನ್ನು ಪ್ರತಿನಿಧಿಸುವ ನಮ್ಮ ಪುಸ್ತಕಋಣಗಳ ಮೇಲೆಣ ಓಟ್ಟಾರೆ ಋಣಭಾರವನ್ನು ನಿಮ್ಮ ಹೆಸರಿನಲ್ಲಿ ಸಿದ್ಧ ಪಡಿಸಲು ಅನುವಾಗುವಂತೆ ನಿಮಗೆ ಅಗತ್ಯವಿರುವ ದಸ್ತಾವೇಜುಗಳನ್ನು ತಯಾರಿಸಿಕೊಡಲು ನಾವು ಈ ಮೂಲಕ ಒಪ್ಪಿದ್ದೇವೆ ಅಥವಾ ನೀಈವು ಬಯಸಿದಾಗ ಮಾರಾಟಕ್ಕೆ ಸಿದ್ದವಿರುವ ಅಥವಾ ನೀವು ಬೇಕೆಂದಾಗ ವರ್ಗಾಯಿಸಬಲ್ಲ ಭದ್ರತೆಗಳನ್ನು ತಮಗೆ ನೀಡಲು ನಾವು ಒಪ್ಪಿದ್ದೇವೆ.

(8) ಕೆಳಗಿನ ನಿದರ್ಶನಗಳಲ್ಲಿ, ನೀವು ಸೂಚಿಸುವ ಹೆಚ್ಚಿನ ದರದಲ್ಲಿ ಬಡ್ಡಿಯನ್ನು ನೀಡಲು ನಾವು ಒಪ್ಪಿಕೊಳ್ಳುತ್ತೇವೆ ಹಾಗೂ ಅದನ್ನು ಪಾಲಿಸುತ್ತೇವೆ, ಎಲ್ಲೆಂದರೆ,

(ಎ ) ನೀಡಿರುವ ಮಿತಿಯನ್ನು ಮೀರಿದ, ರಫ್ತುಸಾಲದ ಮರುಸಾಲ ನೀಡಿಕೆಯ ಬಳಕೆ.

(ಬಿ ) ಮರುಸಾಲ ನೀಡಿಕೆಯ ಮಿತಿಯನ್ನು ತಪ್ಪಾಗಿ ಲೆಕ್ಕ ಹಾಕಿದಲ್ಲಿ/ವರದಿ ಮಾಡಿದ ಸಂದರ್ಭ

(ಸಿ) ನಮ್ಮ ಖಾತೆಯಲ್ಲಿನ ನಿಧಿ ಪ್ರಮಾಣದ ಕೊರತೆಯಿಂದಾಗಿ, 180 ದಿನಗಳಿಗೆ ಮೀರಿ ಬಾಕಿ ಉಳಿಸಿಕೊಳ್ಳುವುದು.

(ಡಿ) ಸಾಲದ ಮಿತಿ ಮೀರಿದ ಅಥವಾ ಅನಿಯಮಿತ ಬಳಕೆಯ ವರದಿಯಲ್ಲಿ ದೀರ್ಘ ವಿಳಂಬ ವಾದಾಗ ವಿಳಂಬದ ಅವಧಿಗೆ.

(9) ಯಾವುದೇ ಸಮಯದ ಜಮಾ ಶಿಲ್ಕು ಅಥವಾ ಯಾವುದೇ ಭಾಗಶಃ ಪಾವತಿ ಅಥವಾ ಖಾತೆಯ ಏರಿಳಿಕೆ ಅಥವಾ ಭದ್ರತೆಯ ಯಾವುದೇ ಭಾಗದ ಹಿಂಪಡೆಯುವಿಕೆಯನ್ನು ಪರಿಗಣಿಸದೆ ಈ ಒಪ್ಪಂದ ಮತ್ತು ಉಲ್ಲೇಖಿಸಿರುವ ರೂ__________ನ ಡಿಮಾಂಡ್ ಪ್ರಾಮಿಸರಿ ನೋಟು ಪಡೆದುಕೊಂಡಿರುವ ಈ ಸಾಲಕ್ಕೆ ಭದ್ರತೆಯಾಗಿ ಮುಂದುವರಿಸಲು ಒಪ್ಪಿರುತ್ತೇವೆ.

ನಿಮ್ಮ ವಿಶ್ವಾಸಿ

ಸಹಿ/–

ಅದರ ಮತ್ತು ಅದರ ಪರವಾಗಿ
(ಅನುಸೂಚಿತ ಬ್ಯಾಂಕಿನ ಹೆಸರು)

(ಅಧಿಕೃತ ಅಧಿಕಾರಿಯ ಸಹಿ)
ಹುದ್ದೆ

ಡಿ – 295ಎ
(ಶೀರ್ಷಿಕೆ ಪತ್ರದ ಮೇಲೆ)
ಡಿಮ್ಯಾಂಡ್ ಪ್ರಾಮಿಸರಿ ನೋಟ್
(ರಫ್ತುಸಾಲ ಮರುಸಾಲ ನೀಡಿಕೆ ಸೌಲಭ್ಯ)

ಬೇಡಿಕೆ ಮೇರೆಗೆ, ನಾವು (ಬ್ಯಾಂಕಿನ ಹೆಸರು), ಭಾರತೀಯ ರಿಸರ್ವ್ ಬ್ಯಾಂಕಿಗೆ ಅಥವಾ ಅದರ ಆದೇಶಕ್ಕೆ ರೂ_______(ರೂಪಾಯಿ__________________.) ಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ಘೋಷಿಸಿರುವ ರಿಪೋ ದರದಲ್ಲಿ ಬಡ್ಡಿಯೂ ಸೇರಿದಂತೆ, ಪೂರ್ಣ ಮರುಪಾವತಿಯ ಸಮಯ ಅಥವಾ ಮಾಸಿಕ ವಿರಾಮಗಳಲ್ಲಿ ಯಾವುದು ಮೊದಲೋ ಅದರಂತೆ ಪಡೆದಿರುವ ಮೌಲ್ಯಕ್ಕೆ ನೀಡಲು ನಾವು ಬದ್ಧ ಎಂದು ವಾಗ್ದಾನ ನೀಡುತ್ತೇವೆ.

ಸ್ಥಳ: ಅದರ ಮತ್ತು ಅದರ ಪರವಾಗಿ____.,
ದಿನಾಂಕ:

(2 ಸಹಿಗಳು ಮತ್ತು ಕಂದಾಯ ಮುದ್ರಾಂಕ)
ಹೆಸರುಗಳು ಮತ್ತು ಎರಡು ಸಹಿ ಮಾಡಿದವರ ಹುದ್ದೆ ಹೆಸರು

**ಡಿಎಡಿ – 298**

**ಪ್ಯಾರಾ. 7.71**

**ಮಂಡಳಿ ನಿರ್ಣಯದ ನಮೂನೆ**

ಮಂಡಳಿ ನಿರ್ಣಯ ಸಂ__________..ಯ ಪ್ರತಿ_________...ರಂದು ನಡೆದ ಮಂಡಳಿಯ ಸಭೆಯಲ್ಲಿ ಅಂಗೀಕೃತವಾದಂತೆ

"ನಿರ್ಣಯಿಸಲಾಗಿದೆ–,

(i) 1934 ರ ಭಾರತೀಯ ರಿಸರ್ವ್ ಬ್ಯಾಂಕ್ ಕಾಯ್ದೆಯ ಪ್ರಕರಣದ 17(3ಎ) ಅಡಿ ಸರಕು ರವಾನೆ ಪೂರ್ವ ಸಾಲ ಯೋಜನೆ ಮತ್ತು/ಅಥವಾ ರಫ್ತುಬಿಲ್ಲುಗಳ ಸಾಲ ಯೋಜನೆಯ ನಿಯಮಾವಳಿಯಂತೆ ಭಾರತೀಯ ರಿಸರ್ವ್ ಬ್ಯಾಂಕ್ ಅನುಮೋದಿಸಿದ, ಮಿತಿಯವರೆಗೆ ಮತ್ತು ಕಾಲಕಾಲಕ್ಕೆ ವಿಧಿಸಬಹುದಾದ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟು, ಬ್ಯಾಂಕು ಸಾಲ ಪಡೆಯಬಹುದು.

(ii) ಕೆಳಗೆ ಸೂಚಿಸಿರುವ ಬ್ಯಾಂಕಿನ ಅಧಿಕಾರಿಗಳು, ಬ್ಯಾಂಕಿನ ಪರವಾಗಿ ಅಗತ್ಯ ಒಪ್ಪಂದಗಳು, ಸಾಲದ ದಾಖಲೆಗಳು, ಘೋಷಣಾ ಪತ್ರಗಳು, ವಿವರ ಪಟ್ಟಿಗಳು, ಪ್ರಮಾಣಪತ್ರಗಳನ್ನು ಮತ್ತು ಭಾರತೀಯ ರಿಸರ್ವ್ ಬ್ಯಾಂಕಿನಿಂದ ಮೇಲೆ ಸೂಚಿಸಿರುವ ಸೌಲಭ್ಯಗಳನ್ನು ಪಡೆಯುವ ಉದ್ದೇಶಕ್ಕಾಗಿ ಭಾರತೀಯ ರಿಸರ್ವ್ ಬ್ಯಾಂಕಿಗೆ ಅವಶ್ಯಕವೆನಿಸಬಹುದಾದ ಇತರ ಪತ್ರಗಳು ಮತ್ತು ದಾಖಲೆಗಳನ್ನು ನಿರ್ವಹಿಸಲು ಮತ್ತು ಒದಗಿಸಲು ಪ್ರತ್ಯೇಕವಾಗಿ ಅಧಿಕಾರ ಪಡೆದಿದ್ದಾರೆ.

––––––

ನಮೂನೆ – ‘ಡಿ’

ಡಿಎಡಿ – 299

ದಿನಾಂಕ:

ಭಾರತೀಯ ರಿಸರ್ವ್ ಬ್ಯಾಂಕ್,
ಠೇವಣಿ ಖಾತಾ ಇಲಾಖೆ(ಡಿಪಾಸಿಟ್ ಅಕೌಂಟ್ಸ್ ಡಿಪಾರ್ಟ್‌ಮೆಂಟ್),
ಮುಂಬೈ – 400001

ಮಾನ್ಯರೆ,

ದಿನಾಂಕ__________ರ ಒಪ್ಪಂದಕ್ಕೆ ಸಂಬಂಧಿಸಿದಂತೆ, ರೂ_________(ರೂಪಾಯಿ-------)ಗಳಿಗೆ ನಿರ್ದಿಷ್ಟ ಪಡಿಸಿದ ಮಿತಿಯನ್ನು, ಹೊಸ ಮಿತಿ ರೂ_________(ರೂಪಾಯಿ-------)ಗಳೆ ಹೆಚ್ಚಿಸಲು ತಾವು ಅನುಮತಿಸಿದ್ದು, ಆ ಮಿತಿಗೆ ಸಮನಾಗಿ, ಮಾಸಿಕ ವಿರಾಮದೊಂದಿಗಿನ, --------- ಬಡ್ಡಿ ದರ ಹೊಂದಿರುವ ಒಂದು ಕ್ರೋಢೀಕೃತ ಡಿಮ್ಯಾಂಡ್ ಪ್ರಾಮಿಸರಿ ನೋಟ್‌ಅನ್ನು ನಾವು ನಿಮಗೆ ನೀಡಿದ್ದೇವೆ ಹಾಗೂ ಮೇಲೆ ತಿಳಿಸಿರುವ ಒಪ್ಪಂದಕ್ಕೆ ಅನ್ವಯವಾಗುವ ಎಲ್ಲ ನಿಬಂಧನೆಗಳು ಹೊಸ ಮಿತಿಗೂ ಮತ್ತು ರೂ_________(ರೂಪಾಯಿ-------)ಗಳ ಕ್ರೋಢೀಕೃತ ಡಿಮ್ಯಾಂಡ್ ಪ್ರಾಮಿಸರಿ ನೋಟಿಗೂ ಮತ್ತು ಅದರಡಿಯಲ್ಲಿಯ ಮುಂಗಡಗಳಿಗೂ ಮತ್ತು ರೂ_________(ರೂಪಾಯಿ-------)ಗಳ ಡಿಮ್ಯಾಂಡ್ ಪ್ರಾಮಿಸರಿ ನೋಟ್ ಹಾಗೂ ಅದರಡಿಯಲ್ಲಿಯ ಮುಂಗಡಗಳಿಗೂ ಅನ್ವಯಿಸುತ್ತದೆ.

ನಿಮ್ಮ ವಿಶ್ವಾಸಿ,

ಸಹಿ/-

ಪರವಾಗಿ
(ಅನುಸೂಚಿತ ಬ್ಯಾಂಕಿನ ಹೆಸರು)

# ಅನುಬಂಧ – III

## ವರದಿ ಮಾಡುವ ನಮೂನೆಗಳು

## ಪರಿಶಿಷ್ಟ

## ಸುತ್ತೋಲೆಗಳ ಪಟ್ಟಿ

| ಕ್ರಮ ಸಂಖ್ಯೆ | ಸುತ್ತೋಲೆಯ ಸಂಖ್ಯೆ | ವಿಷಯ |
|---|---|---|
| 1. | ಡಿಬಿಒಡಿ.ಸಂ. ಬಿಎಂ.2732/ಸಿ.297/ಕೆ.63<br>ದಿನಾಂಕ ಮಾರ್ಚ್ 13, 1963 | ರಫ್ತು ಬಿಲ್ಲುಗಳ ಸಾಲ ಯೋಜನೆ |
| 2. | ಡಿಬಿಒಡಿ.ಸಂ. ಬಿಎಂ.78/ಸಿ.297(ಎಂ)–69<br>ದಿನಾಂಕ ಜನವರಿ 20, 1969 | ಸರಕು ರವಾನೆಪೂರ್ವ ಸಾಲ – ಮರುಸಾಲ ನೀಡಿಕೆ |
| 3. | ಡಿಬಿಒಡಿ.ಸಂ. ಬಿಎಂ.931/ಸಿ.297ಪಿ–69<br>ದಿನಾಂಕ ಜೂನ್ 9, 1969 | ಭಾರತೀಯ ರಿಸರ್ವ್ ಬ್ಯಾಂಕ್ ಕಾಯ್ದೆ, 1934 ರ ಪ್ರಕರಣ 17(3ಎ)ದ ಅಡಿಯಲ್ಲಿ ಮರುಸಾಲ ನೀಡಿಕೆ<br>– ಸರಕು ರವಾನೆ ಪೂರ್ವ ಸಾಲ ಯೋಜನೆ |
| 4. | ಸಿಪಿಸಿ ಸಂ ಬಿಸಿ. 45/279ಎ–81<br>ದಿನಾಂಕ ಮಾರ್ಚ್ 18, 1981 | ರಫ್ತು ಮರುಹಣಕಾಸು ನೀಡಿಕೆ |
| 5. | ಸಿಪಿಸಿ ಸಂ ಬಿಸಿ. 46/279ಎ–81<br>ದಿನಾಂಕ ಮೇ 27, 1981 | ರಫ್ತು ಸಾಲ ಮರುಸಾಲದ ಮೇಲಿನ ಬಡ್ಡಿದರ |
| 6. | ಸಿಪಿಸಿ ಸಂ ಬಿಸಿ. 60/279ಎ–82<br>ದಿನಾಂಕ ಅಕ್ಟೋಬರ್25, 1982 | ರಫ್ತುಸಾಲ ಮರುಸಾಲದ ಮೇಲಿನ ಬಡ್ಡಿದರದಲ್ಲಿ ಬದಲಾವಣೆ |
| 7. | ಸಿಪಿಸಿ ಸಂ ಬಿಸಿ. 64/279ಎ–83<br>ದಿನಾಂಕ ಅಕ್ಟೋಬರ್, 1983 *<br>ನಿಜವಾದ ದಿನಾಂಕ ಅಕ್ಟೋಬರ್ 20,1983 ಆಗಿರುತ್ತದೆ | ರಫ್ತುಸಾಲದ ಮರುಸಾಲ |
| 8. | ಸಿಪಿಸಿ ಸಂ ಬಿಸಿ. 77/279ಎ–85<br>ದಿನಾಂಕ ಅಕ್ಟೋಬರ್ 25, 1985 | ರಫ್ತುಸಾಲದ ಮರುಸಾಲ |
| 9. | ಸಿಪಿಸಿ ಸಂ ಬಿಸಿ. 79/279ಎ–86<br>ದಿನಾಂಕ ಆಗಸ್ಟ್1, 1986 | ರಫ್ತುಸಾಲ ಮರುಸಾಲ ನೀಡಿಕೆ–ಬಡ್ಡಿದರದಲ್ಲಿ ಬದಲಾವಣೆ |
| 10. | ಸಿಪಿಸಿ ಸಂ ಬಿಸಿ. 91/279ಎ–88<br>ದಿನಾಂಕ ಏಪ್ರಿಲ್2, 1988 | ರಫ್ತುಸಾಲದ ಮರುಸಾಲ |
| 11. | ಸಿಪಿಸಿ ಸಂ ಬಿಸಿ. 98/279ಎ–89 | ರಫ್ತುಸಾಲದ ಮರುಸಾಲ |

| | | |
|---|---|---|
| | ದಿನಾಂಕ ಮಾರ್ಚ್ 27, 1989 | |
| 12. | ಸಿಪಿಸಿ ಸಂ ಬಿಸಿ. 103/279ಎ-90<br>ದಿನಾಂಕ ಏಪ್ರಿಲ್ 12, 1990 | ರಫ್ತು ಸಾಲದ ಮರುಸಾಲ |
| 13. | ಸಿಪಿಸಿ ಸಂ ಬಿಸಿ. 111/279ಎ-91<br>ದಿನಾಂಕ ಏಪ್ರಿಲ್ 12, 1991 | ರಫ್ತು ಸಾಲದ ಮರುಸಾಲ |
| 14. | ಸಿಪಿಸಿ ಸಂ ಬಿಸಿ. 115/279ಎ-91<br>ದಿನಾಂಕ ಸೆಪ್ಟೆಂಬರ್ 03, 1991 | ರಫ್ತುಸಾಲದ ಮರುಸಾಲ |
| 15. | ಸಿಪಿಸಿ ಸಂ ಬಿಸಿ. 116/279ಎ-91<br>ದಿನಾಂಕ ಅಕ್ಟೋಬರ್, 08, 1991 | ರಫ್ತುಸಾಲದ ಮರುಸಾಲ |
| 16. | ಸಿಪಿಸಿ ಸಂ ಬಿಸಿ. 122/279ಎ-92<br>ದಿನಾಂಕ ಏಪ್ರಿಲ್ 21, 1992 | ರಫ್ತುಸಾಲದ ಮರುಸಾಲ (ರೂಪಾಯಿ) ಮತ್ತು ಯುಎಸ್ ಡಾಲರ್‌ನಲ್ಲಿ ಸೂಚಿಸಿದ ಪೋಸ್ಟ್-ಶಿಪ್‌ಮೆಂಟ್ ಸಾಲದ ಮರುಸಾಲಕ್ಕೆ ಬಡ್ಡಿ ದರಗಳು |
| 17. | ಸಿಪಿಸಿ ಸಂ ಬಿಸಿ. 123/279ಎ-92<br>ದಿನಾಂಕ ಏಪ್ರಿಲ್ 23, 1992 | ರಫ್ತುಸಾಲದ ಮರುಸಾಲ (ರೂಪಾಯಿ) ಮತ್ತು ಯುಎಸ್ ಡಾಲರ್‌ನಲ್ಲಿ ಸೂಚಿಸಿದ ಪೋಸ್ಟ್-ಶಿಪ್‌ಮೆಂಟ್ ಸಾಲದ ಮೇಲೆ ಮರುಸಾಲ |
| 18. | ಸಿಪಿಸಿ ಸಂ ಬಿಸಿ. 129/07.01.279/92-93<br>ದಿನಾಂಕ ಏಪ್ರಿಲ್ 07, 1993 | ರಫ್ತುಸಾಲದ ಮರುಸಾಲ (ರೂಪಾಯಿ) ಮತ್ತು ಯುಎಸ್ ಡಾಲರ್‌ನಲ್ಲಿ ಸೂಚಿಸಿದ ಪೋಸ್ಟ್-ಶಿಪ್‌ಮೆಂಟ್ ಸಾಲದ ಮೇಲೆ ಮರುಸಾಲ |
| 19. | ಸಿಪಿಸಿ ಸಂ ಬಿಸಿ. 132/07.01.279/93-94<br>ದಿನಾಂಕ ಅಕ್ಟೋಬರ್ 11, 1993 | ರಫ್ತುಸಾಲದ ಮರುಸಾಲ (ರೂಪಾಯಿ) ಮತ್ತು ಯುಎಸ್ ಡಾಲರ್‌ನಲ್ಲಿ ಸೂಚಿಸಿದ ಪೋಸ್ಟ್-ಶಿಪ್‌ಮೆಂಟ್ ಸಾಲದ ಮೇಲೆ ಮರುಸಾಲ |
| 20. | ಸಿಪಿಸಿ ಸಂ ಬಿಸಿ. 136/07.01.279/93-94<br>ದಿನಾಂಕ ಮೇ 14, 1994 | ರಫ್ತುಸಾಲದ ಮರುಸಾಲ (ರೂಪಾಯಿ) ಮತ್ತು ಯುಎಸ್ ಡಾಲರ್‌ನಲ್ಲಿ ಸೂಚಿಸಿದ ಪೋಸ್ಟ್-ಶಿಪ್‌ಮೆಂಟ್ ಸಾಲದ ಮೇಲೆ ಮರುಸಾಲ |
| 21. | ಸಿಪಿಸಿ ಸಂ ಬಿಸಿ. 144/07.01.279/94-95<br>ದಿನಾಂಕ ಏಪ್ರಿಲ್ 17, 1995 | ಅವಧಿ ಠೇವಣಿಗಳ ಮೇಲೆ ಬಡ್ಡಿ ದರಗಳು |
| 22. | ಸಿಪಿಸಿ ಸಂ 3559/03.02.15/94-95 | ರಫ್ತುಸಾಲದ ಮರುಸಾಲ |

| | | |
|---|---|---|
| | ದಿನಾಂಕ ಏಪ್ರಿಲ್ 20, 1995 | |
| 23. | ಯುಬಿಡಿ.ಡಿಎಸ್.ಎಸ್‌ಯುಬಿ/ಸಿಐಆರ್.3/13.04.00/95–96279/94–5<br>ದಿನಾಂಕ ಫೆಬ್ರವರಿ 07, 1996 | ಮುಂಗಡಗಳ ಮೇಲಿನ ಬಡ್ಡಿದರಗಳು |
| 24. | ಸಿಪಿಸಿ ಸಂ 2101/03.02.01/95–96<br>ದಿನಾಂಕ ಜನವರಿ 15, 1996 | ಅಮೆರಿಕಾ ಡಾಲರ್‌ನಲ್ಲಿ ಸೂಚಿಸಿದ ಪೋಸ್ಟ್–ಶಿಪ್‌ಮೆಂಟ್ ರಫ್ತು ಸಾಲದ ಮೇಲಿನ ಮರುಸಾಲ (ಪಿ.ಎಸ್.ಸಿ.ಎಫ್.ಸಿ) |
| 25. | ಸಿಪಿಸಿ /03.02.01/95–96<br>ದಿನಾಂಕ ಫೆಬ್ರವ್ರ07, 1996 | ರಫ್ತುಸಾಲದ ಮರುಸಾಲ |
| 26. | ಸಿಪಿಸಿ ಸಂ.3466/03.02.01/95–96<br>ದಿನಾಂಕ ಏಪ್ರಿಲ್ 04, 1996 | ರಫ್ತುಸಾಲದ ಮರುಸಾಲ |
| 27. | ಐಇಸಿಡಿ ಸಂ. 10/04.02.01/96–97<br>ದಿನಾಂಕ ಅಕ್ಟೋಬರ್ 19, 1996 | ಮುಂಗಡಗಳ ಮೇಲಿನ ಬಡ್ಡಿದರಗಳು–ಪೋಸ್ಟ್–ಷಿಪ್ ಮೆಂಟ್ ರೂಪಾಯಿ ಸಾಲ |
| 28. | ಸಿಪಿಸಿ ಸಂ 1067/03.02.01/96–97<br>ದಿನಾಂಕ ಅಕ್ಟೋಬರ್ 23, 1996 | ರಫ್ತು ಸಾಲದ ಮರುಸಾಲ |
| 29. | ಸಿಪಿಸಿ ಸಂ 2652/03.02.01/96–97<br>ದಿನಾಂಕ ಏಪ್ರಿಲ್ 21, 1997 | ರಫ್ತುಸಾಲದ ಮರುಸಾಲ |
| 30. | ಎಂಪಿಡಿ ಸಂ 2035/03.02.01/97–98<br>ದಿನಾಂಕ ಜನವರಿ 16, 1998 | ರಿಸರ್ವ್ ಬ್ಯಾಂಕಿನ ಮರುಸಾಲ |
| 31. | ಸಿಪಿಸಿ ಸಂ 2662/03.02.01/97–98<br>ದಿನಾಂಕ ಮಾರ್ಚ್ 18, 1998 | ಭಾರತೀಯ ರಿಸರ್ವ್ ಬ್ಯಾಂಕಿನ ರಫ್ತುಸಾಲದ ಮರುಸಾಲ ಸೌಲಭ್ಯದ ಮೇಲಿನ ಬಡ್ಡಿದರಗಳು |
| 32. | ಎಂಪಿಡಿ.ಸಂ.2932/03.02.01/97–98<br>ದಿನಾಂಕ ಏಪ್ರಿಲ್ 02, 1998 | ಭಾರತೀಯ ರಿಸರ್ವ್ ಬ್ಯಾಂಕಿನ ಮರುಸಾಲ ಸೌಲಭ್ಯದ ಮೇಲಿನ ಬಡ್ಡಿದರಗಳು |
| 33. | ಎಂಪಿಡಿ ಸಂ 3121/03.02.01/97–98<br>ದಿನಾಂಕ ಏಪ್ರಿಲ್ 29, 1998 | ಭಾರತೀಯ ರಿಸರ್ವ್ ಬ್ಯಾಂಕಿನಿಂದ ಮರುಸಾಲ ಸೌಲಭ್ಯ |
| 34. | ಎಂಪಿಡಿ.ಬಿಸಿ.ಸಂ 177/07.01.279/97–98<br>ದಿನಾಂಕ ಜೂನ್ 11, 1998 | ರಫ್ತುಸಾಲದ ಮೇಲಿನ ಬಡ್ಡಿದರಗಳು |
| 35. | ಎಂಪಿಡಿ 49/03.02.01/98–99<br>ದಿನಾಂಕ ಜುಲೈ 08, 1998 | ರಫ್ತುಸಾಲದ ಮರುಸಾಲ |
| 36. | ಎಂಪಿಡಿ.ಬಿಸಿ.ಸಂ 179/07.01.279/98–99 | ರಫ್ತುಸಾಲ ಮತ್ತು |

| | | |
|---|---|---|
| | ದಿನಾಂಕ ಆಗಸ್ಟ್ 06, 1998 | ರಫ್ತುಸಾಲ ಮರುಸಾಲದ ಮೇಲಿನ ಬಡ್ಡಿದರ |
| 37. | ಎಂಪಿಡಿ ಸಂ 1018/03.02.01/98-99<br>ದಿನಾಂಕ ಅಕ್ಟೋಬರ್ 15, 1998 | ರಫ್ತುಸಾಲ ಮರುಸಾಲದ ಮಿತಿಯ ಬಗ್ಗೆ ಪಾಕ್ಷಿಕ ವಿವರಪಟ್ಟಿ |
| 38. | ಎಂಪಿಡಿ.ಬಿಸಿ.ಸಂ. 182/07.01.279/98-99<br>ದಿನಾಂಕ ಮಾರ್ಚ್ 01, 1999 | ಬ್ಯಾಂಕುದರ ಮತ್ತು ರಫ್ತುಸಾಲದ ಮರುಸಾಲ ದರ |
| 39. | ಎಂಪಿಡಿ.ಬಿಸಿ.ಸಂ. 184/07.01.279/98-99<br>ದಿನಾಂಕ ಮಾರ್ಚ್ 01, 1999 | ಬ್ಯಾಂಕುದರ ಮತ್ತು ರಫ್ತುಸಾಲ ಮರುಸಾಲದ ಮೇಲಿನ ಬಡ್ಡಿದರ |
| 40. | ಎಂಪಿಡಿ. 3278/03.02.01/99-2000<br>ದಿನಾಂಕ ಏಪ್ರಿಲ್ 01, 2000 | ರಫ್ತುಸಾಲದ ಮರುಸಾಲ ಮತ್ತು ಸಹಭದ್ರತೆ ಸಾಲ ನೀಡಿಕೆ ಮೇಲಿನ ಬಡ್ಡಿದರ |
| 41. | ಎಂಪಿಡಿ ಸಂ 3538/03.02.01/99-2000<br>ದಿನಾಂಕ ಏಪ್ರಿಲ್ 27, 2000 | ಉದಾರೀಕರಿಸಿದ ರಫ್ತುಸಾಲದ ಮರುಸಾಲ ಸೌಲಭ್ಯ |
| 42. | ಎಂಪಿಡಿ ಬಿಸಿ ಸಂ 198/07.01.279/2000-01<br>ದಿನಾಂಕ ಜುಲೈ 21, 2000 | ಬ್ಯಾಂಕ್ ದರ |
| 43. | ಎಂಪಿಡಿ ಬಿಸಿ ಸಂ 200/07.01.279/2000-01<br>ದಿನಾಂಕ ಜುಲೈ 21, 2000 | ರಫ್ತುಸಾಲದ ಮರುಸಾಲ ಮತ್ತು ಸಹಭದ್ರತೆಯ ಸಾಲ ನೀಡಿಕೆ ಸೌಲಭ್ಯ |
| 44. | ಎಂಪಿಡಿ 2992/03.02.01/2000-01<br>ದಿನಾಂಕ ಏಪ್ರಿಲ್ 21, 2000 | ಸ್ಥಾಯಿ ಚರನಿಧಿ ಸೌಲಭ್ಯಗಳ ಯೋಜನೆ |
| 45. | ಎಂಪಿಡಿ 3115/03.02.01/2000-01<br>ದಿನಾಂಕ ಏಪ್ರಿಲ್ 30, 2001 | ಸ್ಥಾಯಿ ಚರನಿಧಿ ಸೌಲಭ್ಯಗಳ ಯೋಜನೆ |
| 46. | ಎಂಪಿಡಿ ಬಿಸಿ ಸಂ 213/02.01.279/2001-02<br>ದಿನಾಂಕ ಮಾರ್ಚ್ 18, 2002 | ರಫ್ತುಸಾಲದ ಮರುಸಾಲ ಯೋಜನೆ |
| 47. | ಎಂಪಿಡಿ.ಬಿಸಿ.ಸಂ. 223/07.01.279/2002-03<br>ದಿನಾಂಕ ಅಕ್ಟೋಬರ್ 29, 2002 | ರಫ್ತುಸಾಲದ ಮರುಸಾಲ ಯೋಜನೆ |
| 48. | ಎಂಪಿಡಿ.ಬಿಸಿ.ಸಂ. 232/07.01.279/2002-03<br>ದಿನಾಂಕ ಏಪ್ರಿಲ್ 29, 2003 | ರಫ್ತುಸಾಲದ ಮರುಸಾಲ ಯೋಜನೆ |
| 49. | ಎಂಪಿಡಿ.ಬಿಸಿ.ಸಂ. 243/07.01,279/2003-04<br>ದಿನಾಂಕ ನವಂಬರ್ 05, 2003 | ಸ್ಥಾಯಿ ಸೌಲಭ್ಯಗಳ ತರ್ಕಬದ್ಧತೆ |
| 50. | ಎಂಪಿಡಿ.ಬಿಸಿ.ಸಂ. 246/07.01.279/2003-04<br>ದಿನಾಂಕ ಮಾರ್ಚ್ 25, 2004 | ಪ್ರಾಥಮಿಕ ಡೀಲರುಗಳಿಗೆ ಮತ್ತು (ಪಿಡಿ) ರಫ್ತುಸಾಲಕ್ಕೆ ಬ್ಯಾಂಕುಗಳಿಗೆ ನೀಡಿರುವ ಸ್ಥಾಯಿ ಚರನಿಧಿ ಸೌಲಭ್ಯಗಳು– |

| | | |
|---|---|---|
| | | ಸುವ್ಯವಸ್ಥಿತಗೊಳಿಸುವುದು |
| 51. | ಎಂಪಿಡಿ ಬಿಸಿ ಸಂ 247/07.01.279/2003–04 ದಿನಾಂಕ ಏಪ್ರಿಲ್ 07, 2004 | ರಫ್ತುಸಾಲಕ್ಕೆ ಬ್ಯಾಂಕುಗಳಿಗೆ ನೀಡಿರುವ ಸ್ಥಾಯಿ ಚರನಿಧಿ ಸೌಲಭ್ಯಗಳು– ಸುವ್ಯವಸ್ಥಿತಗೊಳಿಸುವುದು |
| 52. | ಎಂಪಿಡಿ ಬಿಸಿ ಸಂ 252/07.01.279/2004–2005 ದಿನಾಂಕ ಜುಲೈ 03, 2004 | ರಫ್ತುಸಾಲ ಮರುಸಾಲ ಸೌಲಭ್ಯದ ಪ್ರಧಾನ ಸುತ್ತೋಲೆ. |
| 53. | ಎಂಪಿಡಿ ಬಿಸಿ ಸಂ 270/07.01.279/2005–06 ದಿನಾಂಕ ಜುಲೈ 01, 2005 | ರಫ್ತುಸಾಲ ಮರುಸಾಲ ಸೌಲಭ್ಯದ ಪ್ರಧಾನ ಸುತ್ತೋಲೆ. |
| 54. | ಎಂಪಿಡಿ.ಬಿಸಿ.ಸಂ. 275/07.01.279/2005–06 ದಿನಾಂಕ ಅಕ್ಟೋಬರ್ 25, 2005 | ಬ್ಯಾಂಕುಗಳಿಗೆ ಮತ್ತು ಪ್ರಾಥಮಿಕ ಡೀಲರುಗಳಿಗೆ(ಪಿಡಿ) ರಫ್ತುಸಾಲಕ್ಕೆ ಸ್ಥಾಯಿ ಚರನಿಧಿ ಸೌಲಭ್ಯಗಳು |
| 55. | ಎಂಪಿಡಿ ಬಿಸಿ ಸಂ 278/07.01.279/2005–06 ದಿನಾಂಕ ಜನವರಿ 24, 2006 | ಬ್ಯಾಂಕುಗಳಿಗೆ ಮತ್ತು ಪ್ರಾಥಮಿಕ ಡೀಲರುಗಳಿಗೆ(ಪಿಡಿ) ಸ್ಥಾಯಿ ಚರನಿಧಿ ಸೌಲಭ್ಯಗಳು |
| 56. | ಎಂಪಿಡಿ ಬಿಸಿ ಸಂ 281/07.01.279/2005–06 ದಿನಾಂಕ ಜೂನ್ 09, 2006 | ಬ್ಯಾಂಕುಗಳಿಗೆ ಮತ್ತು ಪ್ರಾಥಮಿಕ ಡೀಲರುಗಳಿಗೆ(ಪಿಡಿ) ಸ್ಥಾಯಿ ಚರನಿಧಿ ಸೌಲಭ್ಯಗಳು |
| 57. | ಎಂಪಿಡಿ ಸಂ 282/07.01.279/2006–07 ದಿನಾಂಕ ಜುಲೈ 12, 2006 | ರಫ್ತುಸಾಲ ಮರುಸಾಲ ಸೌಲಭ್ಯದ ಪ್ರಧಾನ ಸುತ್ತೋಲೆ. |
| 58. | ಎಂಪಿಡಿ ಬಿಸಿ ಸಂ 284/07.01.279/2006–07 ದಿನಾಂಕ ಜುಲೈ 25, 2006 | ಬ್ಯಾಂಕುಗಳಿಗೆ ಮತ್ತು ಪ್ರಾಥಮಿಕ ಡೀಲರುಗಳಿಗೆ(ಪಿಡಿ) ಸ್ಥಾಯಿ ಚರನಿಧಿ ಸೌಲಭ್ಯಗಳು |
| 59. | ಎಂಪಿಡಿ ಬಿಸಿ ಸಂ 287/07.01.279/2006–07 ದಿನಾಂಕ ಅಕ್ಟೋಬರ್ 31, 2006 | ಬ್ಯಾಂಕುಗಳಿಗೆ ಮತ್ತು ಪ್ರಾಥಮಿಕ ಡೀಲರುಗಳಿಗೆ(ಪಿಡಿ) ಸ್ಥಾಯಿ ಚರನಿಧಿ ಸೌಲಭ್ಯಗಳು |
| 60. | ಎಂಪಿಡಿ ಬಿಸಿ ಸಂ 289/07.01.279/2006–07 ದಿನಾಂಕ ಜನವರಿ 31, 2007 | ಬ್ಯಾಂಕುಗಳಿಗೆ ಮತ್ತು ಪ್ರಾಥಮಿಕ ಡೀಲರುಗಳಿಗೆ(ಪಿಡಿ) ಸ್ಥಾಯಿ ಚರನಿಧಿ ಸೌಲಭ್ಯಗಳು |
| 61. | ಎಂಪಿಡಿ.ಬಿಸಿ.ಸಂ. 290/07.01.279/2006–07 ದಿನಾಂಕ ಮಾರ್ಚ್ 30, 2007 | ಬ್ಯಾಂಕುಗಳಿಗೆ ಮತ್ತು ಪ್ರಾಥಮಿಕ ಡೀಲರುಗಳಿಗೆ(ಪಿಡಿ) ಸ್ಥಾಯಿ ಚರನಿಧಿ ಸೌಲಭ್ಯಗಳು |